## ಕಥೆ

ಅನುಮತಿ ಕೊಡಿ' ಎಂದು ಪರಿಪರಿಯಾಗಿ ಕೇಳಿಕೊಂಡ. ಆಗ ಮೌಲ್ವಿಯವರು, 'ನೋಡಿ ಪ್ರಭುರಾವ್ ನೀವು ಅವರ ಶಿಷ್ಯರಾಗಿದ್ದೀರಿ ಎಂಬುದು ನಮಗೂ ಗೊತ್ತು. ಅವರು ತಮ್ಮ ಮಕ್ಕಳಿಗಿಂತ ಹೆಚ್ಚಿಗೆ ನಿಮ್ಮನ್ನು ಪ್ರೀತಿ ಮಾಡುತ್ತಿದ್ದರು. ನೀವು ಅವರ ಅಂತಿಮ ಕ್ರಿಯಾ ವಿಧಿಗಳನ್ನು ಮಾಡಲು ಮುಂದೆ ಬಂದಿದ್ದು ನಾವೆಲ್ಲ ಅಭಿಮಾನ ಪಡುವಂತಹದ್ದು. ಅವರ ಕುಟುಂಬದವರು ಮಾಡದಿದ್ದರೆ, ಜಮಾತನವರು ನಾವೆಲ್ಲ ಸೇರಿ ಮಾಡುತ್ತೇವೆ. ನೀವು ಮಾಡಬೇಕೆಂದು ಕೇಳುವ ಕೆಲಸಕ್ಕೆ ನಮ್ಮವರು ಸಮ್ಮತಿ ಕೊಡುವುದಿಲ್ಲ' ಎಂದಾಗ ನಿರಾಶರಾಗಿ ಪ್ರಭುರಾವ್ ಸುಮ್ಮನಾದರು. ಯುಸೂಫ್ ಮಾಸ್ತರ್ ಕುರಿತು ಪ್ರಕಾಶ ಗುರುಗಳ ಮಾತುಗಳಲ್ಲಿ ಕೇಳಿದ ಕೆಲ ವಿದ್ಯಾರ್ಥಿಗಳು ಕಣ್ಣುಗಳನ್ನು ಒದ್ದೆ ಮಾಡಿಕೊಂಡರು.

ಆಶ್ಚರ್ಯ ಅಂದ್ರ ಪ್ರಭುರಾವ್ ತಮ್ಮ ಗುರುಗಳಿಂದ ತೆರವಾದ ಹುದ್ದೆಗೆ ಆಯ್ಕೆಯಾದರು. ಅದು ಪ್ರಭುರಾವ್ ಅವರ ಭಾಗ್ಯ. ತಿಮ್ಮಾಪುರಿ ಶಾಲೆಗೆ ಶಿಕ್ಷಕರಾಗಿ ಸೇವೆಗೆ ಸೇರಿದರು. ಏಳನೆಯ ತರಗತಿ ವಿದ್ಯಾರ್ಥಿಗಳಲ್ಲಿ ಕೆಲವರು ಚಾಲಾಕಿ ಇದ್ದರು. 'ಈ ಹಿಂದೂಕೆ ಬಚ್ಚೆ ಉರ್ದು ಕ್ಯಾ ಪಡಾತೆ, ಕೈಸೆ ಪಡಾತೆ ದೇಖೆಂಗೆ' ಎಂದು ಕೀಟಲೆ ಮಾಡಲು ಸಿದ್ಧರಾದರು. ಪ್ರಭುರಾವ್ ಅವರದು ಮೊದಲನೆಯ ಕ್ಲಾಸ್ ಬೇರೆ. ಶಿಕ್ಷಕ ಪ್ರಭುರಾವ್ ಒಳಹೋಗುತ್ತಿದ್ದಂತೆ ಪದ್ಧತ್ತಸಿರಿ ವಿದ್ಯಾರ್ಥಿಗಳು ಎದ್ದು ಸಲಾಮ್ ಮಾಡಿದರು. 'ಈಗ ಎಲ್ಲರೂ ತಮ್ಮ ತಮ್ಮ ಪರಿಚಯ ಮಾಡಿಕೊಳ್ಳಬೇಕು' ಎಂದು ಪ್ರಭುರಾವ್ ಹೇಳಿದರು. ಒಬ್ಬ ಎದ್ದು ಮೌಲಾಲಿ ತಂದೆ ಹೆಸರು ಹಸನ್ ಸಾಬ್ ಎಂದು ಹೇಳಿದ. ನಿಮ್ಮಪ್ಪ ನಾನು ಕೂಡೆ ಓದಿದೆವು. ಅವ್ರು ಬೇರೆ ಅಲ್ಲ ನಾ ಬೇರೆ ಅಲ್ಲ. ನೀನಪಾ..ಮುಂದಿನವನ ನೋಡುತ್ತಿದ್ದಂತೆ, ಉಸ್ಮಾನಸಾಬ್, ತಂದೆ ಜಂಗಲಿಸಾಬ್ ಎಂದು ಹೇಳಿದ. ಅವ್ರ ಹೊಲ ನಮ್ಮ ಹೊಲ ಕೂಡೆ ಅದಾವು, ಸೀಮಿ ಸಂಬಂಧ ಎಂದು ಹೇಳಿದರು. ಪ್ರಭುರಾವ್, 'ನೀನಪ್ಪಾ ನಿನ್ನ ಹೆಸರು' ಎಂದು ಮೂಲೆಯಲ್ಲಿ ಕೂತವನಿಗೆ ಕೇಳಿದರು. ಮತ್ತುಲಾಲ ತಂದೆ ಹಸನಅಲಿ ಎಂದು ಹೇಳಿದ. ನಾವು ಅವರೆಲ್ಲ ಕಾಕಾ-ಮಾಮಾ ಎಂದು ಬಾಳಿ ಬದುಕಿದವರು. ಒಬ್ಬೊಬ್ಬರಂತೆ ಹೆಸರು ಕೇಳುತ್ತಾ ಬಂದರು. ಕೊನೆಗೊಬ್ಬ ಉಳಿದಿದ್ದ. 'ನಿನ್ನ ಹೆಸರಪಾ..?' ಎಂದು ಪ್ರಭುರಾವ್ ಮಾಸ್ತರ್ ನಗುತ್ತ ಕೇಳಿದರು. 'ಯಾಸಿನ್' ಎಂದು ಮುಖ ತಿರುವಿ ಬೇಸರ ಮಾಡಿಕೊಂಡು ಹೇಳಿದ. 'ಅರೆ ನಾಮ ಬೋಲನಾ ಹೈತೊ ಸೀದಾ ಬೋಲನಾ! ಸೀದಾ ಬೊಲೊ' ಎಂದು ಪ್ರಭುರಾವ್ ಹೇಳುತ್ತಿದ್ದಂತೆ, 'ಮೊಹ್ಮದ್ ಯಾಸೀನ್' ಎಂದು ಹೇಳಿದ. ನಿಮ್ಮ ತಂದೆಯ ಹೆಸರು ಎಂದು ಕೇಳಿದರು. 'ಜಲಾಲಸಾಬ್; ಏ... ಅವರು ನನ್ನ ಪ್ರೀತಿಯ ಮಾವ ಕಣಪ್ಪ. ನಾವೆಲ್ಲ ಕಳ್ಳುಬಳ್ಳಿ ತರಹ ಬದುಕಿದವರು. ಇಲ್ಲಿರುವ ನಾವೆಲ್ಲರೂ ಒಂದಲ್ಲ, ಒಂದು ರೀತಿ ಬಾಂಧವರು' ಎಂದು ಪ್ರಭುರಾವ್ ಮಾಸ್ತರ್ ಹೇಳುತ್ತಿದ್ದಂತೆ ವಿದ್ಯಾರ್ಥಿಗಳಲ್ಲಿ ಹುಣ್ಣುಗಟ್ಟಿದ್ದ ಕಹಿ ಭಾವ ನಿಧಾನಕ್ಕೆ ದೂರಾಗತೊಡಗಿತು.

ಅಲ್ಲಪಾ ನೀನು 'ಯಾಸೀನ್' ಎಂದು ಹೇಳಿದೆಲ್ಲ. ಈಗ ನಾನು ನಿನ್ನ ಜ್ಞಾನ ಪರೀಕ್ಷೆ ಮಾಡಬೇಕು. ನಿನಗ ಅಪಮಾನ ಮಾಡಬೇಕೆಂದು ಈ ಮಾತು ಕೇಳುತ್ತಿಲ್ಲ. ಹೇಳಪಾ 'ಯಾಸೀನ್ ಅಂದ್ರ ಏನು? ಹೇಳು' ಎಂದು ಪ್ರಭುರಾವ್ ಮಾಸ್ತರ್ ಕೇಳಿದರು. ಗಲಿಬಿಲಿಗೊಂಡು ಎಲ್ಲರ ಮುಖ ನೋಡಿದ ಯಾಸೀನ್, 'ಸರ್ ನನಗೆ ಅರ್ಥ ಗೊತ್ತಿಲ್ಲ' ಎಂದು ಜೊಲ್ಲು ಮಾರಿ ಮಾಡಿಕೊಂಡು ತಲೆ ಕೆಳಗೆ ಮಾಡಿದ. 'ಯಾಸೀನ್, ಅರ್ಥ ಗೊತ್ತಿಲ್ಲಂದ್ರ ನೀನ್ಹೇಗೆ ಇಸ್ಲಾಮದವನು ಮಹಾರಾಯಾ!' ಎಂದು ಪ್ರಭುರಾವ್ ಹಳಹಳಿಸಿದರು. 'ಯಾಸೀನ್ ಅಂದ್ರ ನೀವ್ಯಾರಾದರು ಹೇಳ್ತಿರಾ' ಎಂದು ಎಲ್ಲರನ್ನು ಕೇಳಿದರು. ಎಲ್ಲರೂ ತಲೆ ಅಲ್ಲಾಡಿಸಿ ಬರಲ್ಲ ಜನಾಬ್ ಎಂದರು. 'ಏನಪ್ಪ ನಾವು ನಾವೇ ಭಾರಿ' ಎಂದು, 'ಯಾಸೀನ್‌ನ ಮಾತು ಕೇಳಿ ಗುರುಗಳಿಗೆ ಅಗೌರವ ತೋರಿದೆವಲ್ಲ!' ಎಂದು ಎಲ್ಲರೂ ತಳಮಳಗೊಂಡರು. 'ಗೊತ್ತಿಲ್ಲ ಸರ್ ನೀವೇ ಹೇಳಿ' ಎಂದು ಎಲ್ಲರೂ ಪ್ರಭುರಾವ್ ಗುರುಗಳಲ್ಲಿ ಗೋಗರೆದರು. ಆ ಕಾಲದಲ್ಲೂ ಇದರ ಅರ್ಥ ಯಾವ ವಿದ್ಯಾರ್ಥಿಯೂ ಹೇಳಲಿಲ್ಲ. ಈಗ ನೀವ್ಯಾರಾದರೂ ಹೇಳಬಹುದಾ ಎಂದು ಪ್ರಕಾಶ ಕೇಳಿದರು. 'ಇಲ್ಲ ಸಾರ್ ನಮಗೂ ಗೊತ್ತಿಲ್ಲ, ಹಮೇಬಿ ಮಾಲೂಮ ನಹಿ ಸರ್' ಎಂದರು. ಆಗ ಪ್ರಕಾಶ ಅವರು ಪ್ರಭುರಾವ್ ಮಾಸ್ತರ್ ಹೇಳಿದ ಮಾತು ಹೇಳಲು ಮುಂದಾದರು. 'ಯಾಸೀನ್' ಅಂದರೆ ಖುರಾನಿನ ಹೃದಯ ಭಾಗ, Huart of